**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂ:25/2012</u>** **ಡಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **23.09.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಮುಂದುವರೆದ ಪಾಟಿ ಸವಾಲು:** ವಾದಿ ಪರ ಶ್ರೀ **ಬಿ.ಎಂ.ಎನ್** ವಕೀಲರಿಂದ:</u>

ನಂಜಮ್ಮರವರು ತಮ್ಮ ಜೀವಿತಾವಧಿಯಲ್ಲಿ ಭೂಸ್ವಾಧೀನಾಧಿಕಾರಿಗಳಿಗೆ ನೀಡಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿಯವರು ಅರ್ಜಿಯಲ್ಲಿ ಸರ್ವೇ ನಂ.62 ಜಮೀನಿಗೆ ಸಂಬಂಧಿಸಿ ಅರ್ಜಿ ನೀಡಿದ್ದು, ಅದರ ವಿಸ್ತೀರ್ಣವನ್ನು ನೀಡಿರುವುದಿಲ್ಲ. ಅರ್ಜಿ ನೀಡುವ ಸಮಯದಲ್ಲಿ ಭೂಸ್ವಾದೀನಾಧಿಕಾರಿಯವರು ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರು ಎನ್ನುವುದು ನನಗೆ ಗೊತ್ತಿರುವುದಿಲ್ಲ. ನಂಜಮ್ಮನವರು ಗುತ್ತಿಗೆ ಮಾಡುತ್ತಿದ್ದ ಕಾರಣ ಅದರ ಆಧಾರ ಮೇಲೆ ಅವರ ಹೆಸರಿನಲ್ಲಿ ಖಾತೆ ಆಗಿರುತ್ತದೆ. ಸದರಿ ಗುತ್ತಿಗೆ ಆದೇಶವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಂಜಮ್ಮನವರು ಓ.ಎಸ್ ನಂ.102/2005 ರಲ್ಲಿ ಸುಳ್ಳು ಮಾಹಿತಿ ನೀಡಿ ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ಸದರಿ ದಾವೆಯಲ್ಲಿ ಮಾಡಿರುವ ಡಿಕ್ರಿ ಈ ದಾವೆಯ ವಾದಿಯನ್ನು ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಸ್ವಾಧೀನದಲ್ಲಿರುವ ದಾವಾ ಆಸ್ತಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ:</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**